ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 524/2023

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್
ಪೊಲೀಸ್, ಹಚ್ಚೊಳ್ಳಿ ಪೊಲೀಸ್ ಠಾಣೆ.

-ವಿರುದ್ಧ-

ಆರೋಪಿತರು ಃ

ಎ) ಕೆ.ನಾಗೇಂದ್ರಪ್ಪ ಬಿನ್ ದಿಃ ಮಲ್ಲಯ್ಯ, ವಃ 46 ವರ್ಷ,
ವಾಸಃ ಬೀರಳ್ಳಿ ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಃ

## ದೋಷಾರೋಪಣೆ

ನಾನು ಶ್ರೀ ಅಶೋಕ್ ಆರ್.ಹೆಚ್., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆಃ

ದಿನಾಂಕ **09-04-2023** ರಂದು ಬೆಳಿಗ್ಗೆ **10.30** ಗಂಟೆ ಸುಮಾರಿಗೆ ಹಚ್ಚೊಳ್ಳಿ ಪೋಲಿಸ್ ಠಾಣಾ ಸರಹದ್ದಿನ ಚಾಸಾ-**1** ರವರು ಬೀರಳ್ಳಿ ಗ್ರಾಮದ ತಮ್ಮ ಕಿರಾಣಿ ಅಂಗಡಿಯಲ್ಲಿ ಒಬ್ಬಳೇ ಇರುವುದನ್ನು ನೋಡಿ ಆರೋಪಿಯಾದ ನೀವು ಅಂಗಡಿ ಹತ್ತಿರ ಬಂದು ಅಸಭ್ಯವಾಗಿ ವರ್ತನೆ ಮಾಡುತ್ತಾ ನಿನಗೆ **10-12** ವರ್ಷಗಳಿಂದ ಮಕ್ಕಳಾಗಿರುವುದಿಲ್ಲ, ನಾನು ನಿನ್ನ ಮನೆಗೆ ಬಂದು ನಿನ್ನ ಜೊತೆ ಮಲಗುತ್ತೇನೆ, ನಿನ್ನ ಗಂಡನಿಗೆ ಈ ವಿಷಯ ಹೇಳಬೇಡ ಎಂದಾಗ ಚಾಸಾ-**1** ರವರು ಗಾಬರಿ ಬಿದ್ದು ನಿನಗೆ ತಲೆ ಕೆಟ್ಟಿದಿಯಾ ಎನ್ನುತ್ತಾ ಅಂಗಡಿಯಿಂದ ಹೊರಬಂದು ತನ್ನ ಮನೆಯ ಕಡೆಗೆ ಹೋಗುತ್ತಿದ್ದಾಗ ಆರೋಪಿಯು ಚಾಸಾ-**1** ರವರನ್ನು ಮುಂದಕ್ಕೆ ಹೋಗದಂತೆ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ **341** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿಯಾದ ನೀವು ಸದರಿ ವಿಚಾರವಾಗಿ ಚಾಸಾ-1 ರವರ ಕೈಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿರುತ್ತೀರಿ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **354(ಬಿ)** ಸಹವಾಚಕ ಕಲಂ **34** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

(ಅಶೋಕ್ ಆರ್.ಹೆಚ್.)

**ದಿನಾಂಕಃ** 09.10.2025 ಪ್ರ.ದ.ನ್ಯಾದಂ., ಸಿರುಗುಪ್ಪ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 524/2023

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, **ಹಚ್ಚೊಳ್ಳಿ** ಪೊಲೀಸ್ ಠಾಣೆ.

-ವಿರುದ್ಧ-

**ಆರೋಪಿತರು** ಃ

ಎ) ಕೆ.ನಾಗೇಂದ್ರಪ್ಪ ಬಿನ್ ದಿಃ ಮಲ್ಲಯ್ಯ, ವಃ 46 ವರ್ಷ,
ವಾಸಃ ಬೀರಳ್ಳಿ ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಃ

**ಆರೋಪಣೆ**

ಪ್ರಶ್ನೆ ಃ ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರಃ

ಪ್ರಶ್ನೆ ಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರಃ

(ಮೇಲಿನ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದರಿ ಆರೋಪಿಯಿಂದ ಪಡೆದಿದ್ದು, ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).

**ದಿನಾಂಕಃ** 09.10.2025.

**ಪ್ರ. ದ. ನ್ಯಾ. ದಂ., ಸಿರುಗುಪ್ಪ.**